




ಆ ಕಪ್ಪು ಫ್ರೇಮಿನ ದಪ್ಪ ಕನ್ನಡಕ, ಅಂಬೇಡ್ಕರ್ ಅಲ್ಲೇ ಓದುತ್ತಾ ಕೂತಿರುವವರು ಎಲ್ಲೋ ಹೋಗಿದ್ದಾರೆ, ಇನ್ನೇನು ಇದೀಗ ಬಂದು ಆ ಕನ್ನಡಕ ಧರಿಸಿ, ಮತ್ತೆ ಓದಲು ಕೂರುತ್ತಾರೇನೋ ಎನ್ನುವ ಭಾವವನ್ನು ಮೂಡಿಸುತ್ತಿತ್ತು.




ಪ್ರಕಟವಾದಾಗಲೇ ಇಂಗ್ಲಿಷಿನಲ್ಲೇ ಓದಿದ್ದರೂ, ಅನುವಾದಿಸುವಾಗ ಈ ಗಾಂಧಿ ಮತ್ತು ಅಂಬೇಡ್ಕರ್ ಇಬ್ಬರೂ ಬೇರೆಯದೇ ಶಕ್ತಿ ಮತ್ತು ಸಾಧ್ಯತೆಯಲ್ಲಿ ಕಾಣಿಸುವುದನ್ನು ಡಿ.ಆರ್. ನಾಗರಾಜ್ ಅಪೂರ್ವ ಒಳನೋಟಗಳಿಂದ ಕಾಣಿಸಿದ್ದರು. ಆತನಕ ಇಂಟಿಮೇಟ್ ಎನಿಮಿಗಳಂತೆ ಕಾಣಿಸುತ್ತಿದ್ದ ಇವರಿಬ್ಬರೂ ತಮಗೆ ಅನಿವಾರ್ಯವಾದ ದಾರಿಗಳಲ್ಲಿ ಸಾಗುತ್ತಾ ಒಂದೇ ಗುರಿಯನ್ನು ಕನವರಿಸುತ್ತಿರುವವರಂತೆ ಕಂಡರು ಮಾತ್ರವಲ್ಲ, ಒಬ್ಬರು ಇನ್ನೊಬ್ಬರಿಗೆ ಸಂವಾದಿಯಾಗುವುದರಲ್ಲೇ ಅವರಿಬ್ಬರ ವ್ಯಕ್ತಿತ್ವಗಳು ಅರಳುತ್ತಾ ವಿಕಾಸಗೊಳ್ಳುತ್ತಾ ಹೋಗುವುದನ್ನು ಈ ಕೃತಿ ಕಟ್ಟಿಕೊಡುತ್ತದೆ.

ಈ ಇಬ್ಬರನ್ನೂ ಬೆಸೆಯದೆ, ಆ ಬೆಸುಗೆಯಲ್ಲಿ ಸೃಷ್ಟಿಯಾಗುವ ಹೊಸ ಭಿತ್ತಿಯನ್ನು ಕಟ್ಟಿಕೊಳ್ಳದೆ, ಭಾರತಕ್ಕೆ ಭವಿಷ್ಯವಿಲ್ಲವೆನ್ನುವ ಸತ್ಯವನ್ನು ಹೇಳುವ ಈ ಕೃತಿ ಇವತ್ತಿಗೆ ಇನ್ನೂ ಹೆಚ್ಚು ಪ್ರಸ್ತುತವಾಗಿದೆ. ದೇವನೂರು ಮಹಾದೇವ ಅವರು ತಮ್ಮ ಚಿಂತನೆ ಮತ್ತು ಬರಹಗಳಲ್ಲಿ ಈ ಅಂಶವನ್ನು ಇನ್ನೂ ಆಳವಾಗಿ ಶೋಧಿಸುತ್ತಿದ್ದಾರೆ. ಈ ನಡುವೆ ದಲಿತರು ಮತ್ತು ಅಂಬೇಡ್ಕರರ ನಡುವಿನ ಸಂಬಂಧದ ಸ್ವರೂಪ ಕೆಲವೊಮ್ಮೆ ದಿಗಿಲುಗೊಳಿಸುತ್ತಿದ್ದುದೂ ಉಂಟು. ಹಟಕ್ಕೆ ಬಿದ್ದವರಂತೆ ಅವರಿಬ್ಬರನ್ನೂ ಸಮಾನಾಂತರ ರೇಖೆಗಳಾಗಿ ಬೇರ್ಪಡಿಸುವುದರಲ್ಲಿ ನಮ್ಮ ಚಿಂತಕರಿಗೆ, ಕಾರ್ಯಕರ್ತರಿಗೆ ಇರುವ ಆಸಕ್ತಿ ಆತಂಕಕ್ಕೆ ತಳ್ಳುತ್ತಿತ್ತು. ಅಂಬೇಡ್ಕರರ ಬಗೆಗೆ ದಲಿತೇತರ ಮಾತು–ಬರಹಗಳನ್ನು ಅನುಮಾನದಿಂದ ನೋಡುವುದು ಕೆಲವೊಮ್ಮೆ ವಿಷಾದವನ್ನು ಹುಟ್ಟಿಸುತ್ತಿದ್ದರೆ, ಮತ್ತೆ ಕೆಲವೊಮ್ಮೆ ಅದು ನಿಜವೂ ಹೌದು ಎನ್ನುವ ಸತ್ಯ ಆ ವಿಷಾದವನ್ನು ಇನ್ನೂ ಹೆಚ್ಚಿಸುತ್ತಿತ್ತು. ಸ್ತ್ರೀವಾದಿ ಚಿಂತನೆಗಳ ಜೊತೆಯಲ್ಲಿ ನನ್ನ ಪ್ರಯಾಣ ಶುರುವಾದಾಗ, ಗಾಂಧಿ ಮತ್ತು ಅಂಬೇಡ್ಕರ್ ಇಬ್ಬರೂ ನನ್ನ ಭಾವಲೋಕವನ್ನು ತೀವ್ರವಾಗಿ ಆವರಿಸಿದರು. 'ನಾನು ಅರ್ಧ ಹೆಣ್ಣು' ಎನ್ನುವ ಗಾಂಧಿ, 'ಒಂದು ದೇಶದ ಅಭಿವೃದ್ಧಿಯನ್ನು ಅಳೆಯುವ ಮಾನದಂಡಗಳಲ್ಲಿ ಹೆಣ್ಣಿನ ಸ್ಥಿತಿಗತಿಗಳೂ ಒಂದಾಗಬೇಕು' ಎನ್ನುವ ಅಂಬೇಡ್ಕರ್, ಇಬ್ಬರೂ ಸ್ತ್ರೀವಾದಿಗಳಾಗಲು ಹೊರಟವರಂತೆ ಕಾಣಿಸತೊಡಗಿದರು. ಹೆಣ್ಣನ್ನು ಅವಳ ಪರಮಸತ್ಯಗಳಲ್ಲಿ ಕಾಣಿಸಲು ಪ್ರಾಮಾಣಿಕವಾಗಿ ಪ್ರಯತ್ನಿಸಿದ ಇವರಿಬ್ಬರೂ ಭಾರತೀಯ ಸ್ತ್ರೀವಾದವನ್ನು ಕಟ್ಟಿ ಬೆಳೆಸಿದುದರಲ್ಲಿ ಮುಖ್ಯರಾದವರು ಎನ್ನುವುದು ರಾಜಕೀಯವಾಗಿ ಬಹಳ ಮಹತ್ವದ್ದು.

ಜಗತ್ತು ಹೊಸ ಶತಮಾನಕ್ಕೆ ಕಾಲಿಡುವ ಹೊತ್ತಿನಲ್ಲಿ ಎನ್‌ಡಿಟಿವಿಯೋ ಮತ್ತಾವುದೋ ಒಂದು ಟಿ.ವಿ. ಚಾನಲ್ ಕಳೆದ ಶತಮಾನದ ಭಾರತದ ಪ್ರಮುಖ ವ್ಯಕ್ತಿ ಯಾರು ಎನ್ನುವ ಸಮೀಕ್ಷೆಯೊಂದನ್ನು ನಡೆಸಿದೆ. ಅಂತಿಮ ಸುತ್ತಿನಲ್ಲಿ ಇತರ ಕೆಲವರ ಜೊತೆ ಗಾಂಧಿ–ಅಂಬೇಡ್ಕರರೂ ಇದ್ದರು. ಈ ಸಮೀಕ್ಷೆಗೆ ಇರಬಹುದಾದ ಮಿತಿ ಒಳಹುನ್ನಾರ, ರಾಜಕೀಯ ತಂತ್ರಗಾರಿಕೆ ಈ ಎಲ್ಲವನ್ನೂ ಗಮನದಲ್ಲಿಟ್ಟುಕೊಂಡೂ ಈ ಸಮೀಕ್ಷೆಯನ್ನು ಇಡೀ ಭಾರತ ಗಂಭೀರವಾಗಿ ಗಮನಿಸುತ್ತಿತ್ತು. ಅಂಬೇಡ್ಕರ್ ತಾವು ಗಾಢವಾಗಿ ನಂಬಿದ್ದ ಪ್ರಜಾಪ್ರಭುತ್ವದ ಬಹುಮತವನ್ನು ಪಡೆದು, ಶತಮಾನದ ವ್ಯಕ್ತಿಯಾಗಿ ಆಯ್ಕೆಯಾದರು. ಈ ಆಯ್ಕೆ ನೂರಕ್ಕೆ ನೂರು ಪ್ರಾಮಾಣಿಕ ಎನ್ನುವುದು ಸಾಧ್ಯವಿಲ್ಲದಿರಬಹುದು. ಆದರೆ, ಈ ಆಯ್ಕೆಯೇ ನಮಗೆ ಮನವರಿಕೆ ಮಾಡುವ ಹಲವು ಸತ್ಯಗಳಿವೆ. ಅಂಬೇಡ್ಕರ್ ಭಾರತದ ಭವಿಷ್ಯದ ಅನಿವಾರ್ಯ ಆಯ್ಕೆ ಮತ್ತು ಅಗತ್ಯ ಎನ್ನುವ ಒಪ್ಪಿತ ಮತ್ತು ಹಲವರಿಗೆ ಅಪ್ರಿಯವಾದ ಸತ್ಯವನ್ನು ಎತ್ತಿ ಹಿಡಿಯುತ್ತದೆ ಎನ್ನುವುದನ್ನು ನಾನಂತೂ ನಂಬಿದ್ದೇನೆ.

ಅಂಬೇಡ್ಕರ್ ಅವರ ಮನೆಯ ಹೆಸರು 'ರಾಜಗೃಹ'. ಅಂಬೇಡ್ಕರ್ ರಾಜಗೃಹವನ್ನು ಕಟ್ಟಿಸಲು ಆರಂಭಿಸಿದ್ದು 1931ರಲ್ಲಿ, ಮುಗಿಸಿದ್ದು 1933ರಲ್ಲಿ. ಬೃಹದ್ರಥ ಕಟ್ಟಿಸಿದನೆನ್ನಲಾಗುವ ಬೌದ್ಧ ಧಾರ್ಮಿಕ ಕೇಂದ್ರದ ಹೆಸರನ್ನು ಅಂಬೇಡ್ಕರ್ ತಮ್ಮ ಮನೆಗೆ ಆರಿಸಿಕೊಂಡರು. ಈ ರಾಜಗೃಹವನ್ನು ಅವರು ಧ್ಯಾನಸ್ಥ ಸ್ಥಿತಿಯಲ್ಲಿ ಕುಳಿತು ಚಿಂತಿಸಿದ, ಬರೆದ, ಅವರ ಬದುಕಿನ ಸುಖ–ಸಂಭ್ರಮದ, ದುಃಖ–ದುಮ್ಮಾನದ ಗಳಿಗೆಗಳನ್ನು ಕಳೆದ, ಅಭಿಮಾನಿಗಳು ಮತ್ತು ಮಿತ್ರರಿಂದ ತುಂಬಿದ ಮನೆಯಂತೆಯೇ ಏಕಾಂಗಿಯಾಗಿ ತಾನೊಬ್ಬನೇ ಕುಳಿತು ಭಾರತದ ಸ್ಥಿತಿ–